ಆ) ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳಿಗೆ ಸಂಬಂಧಿಸಿದಂತೆ ಸರ್ಕಾರ ಪೂರ್ತಿ ಮೊತ್ತವನ್ನು ಬಿಡುಗಡೆ ಮಾಡಿರುತ್ತದೆ. ದೀರ್ಘಾವಧಿ ಸಾಲಗಳಿಗೆ ಸಂಬಂಧಿಸಿದಂತೆ 2005–06ನೇ ಸಾಲಿನ ಬಡ್ಡಿ ಮನ್ನಾ ಯೋಜನೆಯ ಬಾಬ್ತು ರೂ. 51.78 ಕೋಟಿ ಮಹಾಲೇಖಪಾಲರ ಆಕ್ಷೇಪಣೆಯ ಪ್ರಯುಕ್ತ ಬಿಡುಗಡೆಗೆ ಬಾಕಿ ಇರುತ್ತದೆ. ಪ್ರಸ್ತುತ ವಿಷಯವು ಉಚ್ಚ ನ್ಯಾಯಾಲಯದಲ್ಲಿ ವಿಭಾಗೀಯ ಪೀಠ ರಿಟ್ ಅಪೀಲು ಸಂಖ್ಯೆ: 3649/2010 ಬಾಕಿ ಇರುತ್ತದೆ.

ತೋಟಗಾರಿಕೆಗಾಗಿ ವಿಶೇಷ ಪ್ರೋತ್ಸಾಹಕ ಯೋಜನೆಗಳು

14 (2) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ): ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕಾ ಕ್ಷೇತ್ರಗಳ ಬೆಳವಣಿಗೆಗಾಗಿ ಸರ್ಕಾರದ ಪ್ರೋತ್ಸಾಹಕ ಯೋಜನೆಗಳು ಯಾವುವು ;

ಆ) ಅನುಷ್ಠಾನದಲ್ಲಿರುವ ತೋಟಗಾರಿಕಾ ಅಭಿವೃದ್ಧಿ ಯೋಜನೆಗಳಿಗಾಗಿ ವಿನಿಯೋಗಿಸಿದ ಒಟ್ಟು ಹಣವೆಷ್ಟು ; (ಕಳೆದೆರಡು ವರ್ಷಗಳ ವಿವರ ನೀಡುವುದು)

ಇ) ಕೇಂದ್ರ ಪುರಸ್ಕೃತ ಯೋಜನೆಗಳು ಹಾಗೂ ಅವುಗಳಿಗಾಗಿ ಮಂಜೂರಾದ ಕೇಂದ್ರ ಅನುದಾನ ಎಷ್ಟು ?

ಶ್ರೀ ಎಸ್.ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು):

ಅ) ರಾಜ್ಯದಲ್ಲಿ ತೋಟಗಾರಿಕಾ ಕ್ಷೇತ್ರಗಳ ಬೆಳವಣಿಗೆಗಾಗಿ ಸರ್ಕಾರದ ಪ್ರೋತ್ಸಾಹಕ ಯೋಜನೆಗಳು ಈ ಕೆಳಕಂಡಂತಿವೆ.

1. ರಾಷ್ಟ್ರೀಯ ತೋಟಗಾರಿಕೆ ಮಿಷನ್
2. ಹನಿ ನೀರಾವರಿಗಾಗಿ ಕೇಂದ್ರವಲಯ ಯೋಜನೆ
3. ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆಯ ವ್ಯವಸಾಯ
4. ತೆಂಗು ಅಭಿವೃದ್ಧಿ ಮಂಡಳಿಯ ಸಹಾಯದಲ್ಲಿ ತೆಂಗು ಉತ್ಪಾದಕತೆ/ಅಭಿವೃದ್ಧಿಯ ಸಮಗ್ರ ಬೇಸಾಯದ ಯೋಜನೆ
5. ಅಡಿಕೆ ಸಂಶೋಧನಾ ಕೇಂದ್ರ – ಶೃಂಗೇರಿ
6. ಮಾವು ಅಭಿವೃದ್ಧಿ ಮಂಡಳಿ
7. ಅಡಿಕೆ ಸಿಪ್ಪೆ ಸುಲಿಯುವ ಆಧುನಿಕ ಯಂತ್ರಗಳು
8. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಅಭಿವೃದ್ಧಿ ಮತ್ತು ನಿರ್ವಹಣೆ
9. ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ
10. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ
11. ವಿಶೇಷ ಘಟಕ ಯೋಜನೆ
12. ತೋಟಗಾರಿಕೆ ಅಭಿವೃದ್ಧಿಗಾಗಿ ಹೊಸ ಅನುಶೋಧನೆಗಳು
13. ಅಂತರರಾಷ್ಟ್ರೀಯ ಕೃಷಿ ವ್ಯಾಪಾರ ಮೇಳ
14. ದ್ರಾಕ್ಷಾರಸ ನೀತಿ
15. ಆಲೂಗೆಡ್ಡೆ ಬೆಳೆಗಾಗಿ ಕರ್ನಾಟಕ ತೋಟಗಾರಿಕಾ ಅಭಿವೃದ್ಧಿ ಸಂಸ್ಥೆಯ ಮೂಲಕ ಮಧ್ಯಸ್ಥಿಕೆ ಯೋಜನೆ

16. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ – ತೋಟಗಾರಿಕೆ
17. ತೋಟಗಾರಿಕೆ ಸಲಹಾ ಕೇಂದ್ರ ಮತ್ತು ಹಾರ್ಟಿ ಕ್ಲಿನಿಕ್
18. ಹಣ್ಣು ಮತ್ತು ತರಕಾರಿಗಳ ಸಂಗ್ರಹಣೆ
19. ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ
20. ತೋಟಗಾರಿಕೆ ಉದ್ಯಾನವನಗಳ ಅಭಿವೃದ್ಧಿ
21. ವಿಧಾನಸೌಧ ಉದ್ಯಾನವನ
22. ಬಾಗಲಕೋಟೆಯಲ್ಲಿ ತೋಟಗಾರಿಕಾ ವಿಶ್ವವಿದ್ಯಾಲಯ
23. ರಾಷ್ಟ್ರೀಯ ಔಷಧಿ ಬೆಳೆ ಮಿಷನ್
24. ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ
25. ಶೀಥಲ ಗೃಹಗಳ ಸಹಾಯಧನ
26. ಪ್ರಚಾರ ಮತ್ತು ಸಾಹಿತ್ಯ
27. ರೈತರಿಗೆ ಸಹಾಯ
28. ರೈತರಿಗೆ ತರಬೇತಿ

ಆ) ಕಳೆದೆರಡು ವರ್ಷಗಳಲ್ಲಿ ಅನುಷ್ಠಾನದಲ್ಲಿರುವ ತೋಟಗಾರಿಕಾ ಅಭಿವೃದ್ಧಿ ಯೋಜನೆಗಳಿಗಾಗಿ ಒಟ್ಟು 572.50 ಕೋಟಿಗಳನ್ನು ವಿನಿಯೋಗಿಸಲಾಗಿದೆ.

(ರೂ. ಕೋಟಿಗಳಲ್ಲಿ)

2008–09	2009–10	ಒಟ್ಟು
255.07	317.43	572.50

ಇ) ಕೇಂದ್ರ ಪುರಸ್ಕೃತ ಯೋಜನೆಗಳು ಹಾಗೂ ಅವುಗಳಿಗಾಗಿ ಮಂಜೂರಾದ ಕೇಂದ್ರ ಅನುದಾನದ ವಿವರ ಈ ಕೆಳಕಂಡಂತಿವೆ.

(ರೂ. ಕೋಟಿಗಳಲ್ಲಿ)

ಕ್ರ. ಸಂ.	ಯೋಜನೆಗಳು	2010–11
1	ಹನಿ ನೀರಾವರಿ ಯೋಜನೆ	73.00
2	ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ	112.18
3	ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆಯ ವ್ಯವಸಾಯ	5.52
4	ತೆಂಗು ಅಭಿವೃದ್ಧಿ ಮಂಡಳಿಯ ಸಹಾಯದಲ್ಲಿ ತೆಂಗು ಉತ್ಪಾದಕತೆ / ಅಭಿವೃದ್ಧಿಯ ಸಮಗ್ರ ಬೇಸಾಯದ ಯೋಜನೆ	6.00
5	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	31.50
6	ರಾಷ್ಟ್ರೀಯ ಔಷಧಿ ಬೆಳೆ ಮಿಷನ್	6.95
	ಒಟ್ಟು	**235.15**